ಆಶ್ಚರ್ಯ ತಂದಿದೆ. ಹುಡುಗ ಹುಡುಗಿಯರು ಮಾತನಾಡುವ ಹಾಗಿಲ್ಲ, ಅಧ್ಯಾಪಕರು ಅಕಸ್ಮಾತಾಗಿಯೂ ಹುಡುಗಿಯರೆಡೆ ನೋಡುವ ಹಾಗಿಲ್ಲ. ಕಾರಿಡಾರಿನಲ್ಲಿ ಕಂಡು ಹುಡುಗಿಯರು ವಿಶ್ ಮಾಡಿದರೂ, ಮರು ವಿಶ್ ಮಾಡದೇ ಕೇವಲ ಗೋಣು ಅಲ್ಲಾಡಿಸಿ, ಅಧ್ಯಾಪಕರು ತಲೆ ತಗ್ಗಿಸಿಕೊಂಡು ಹೋಗಬೇಕು. ಸಮಸ್ಯೆಗಳೇನಿದ್ದರೂ ಕ್ಲಾಸ್ ರೂಮಿನಲ್ಲೇ ಬಗೆ ಹರಿಸಿಕೊಳ್ಳಬೇಕು. ಯಾವ ಮರದ ಕೆಳಗೂ ನಿಲ್ಲುವ ಹಾಗಿಲ್ಲವಾದ್ದರಿಂದ ಕಾಲೇಜ್ ಸುತ್ತಮುತ್ತ ಯಾವ ಮರಗಳಿಗೂ ಆಸ್ಪದವಿಲ್ಲ. ಬೋಳು ಮರುಭೂಮಿಯಲ್ಲಿ ಉರಿಯುತ್ತಾ ನಿಂತ ಬಿಳಿ ಕಟ್ಟಡದ ಕಾಲೇಜಿನಲ್ಲಿ, ಅಧ್ಯಾಪಕರಿರಲಿ, ಹುಡುಗರೂ ಟೈ, ಶೂ ಇಲ್ಲದೇ ಕಾಲೇಜಿನ ಆವರಣ ಪ್ರವೇಶಿಸುವ ಹಾಗಿಲ್ಲ. ಹುಡುಗಿಯರು ಕೂದಲನ್ನು ಕಲರ್ ಮಾಡಿಕೊಳ್ಳುವಂತಿಲ್ಲ. ಪ್ಯಾಂಟ್ ಕನಸಿನಲ್ಲೂ ತೊಡುವಂತಿಲ್ಲ. ಸದಾ ಸಲ್ವಾರ್ ಕಮೀಜ್ ವಿತ್ ದುಪ್ಪಟ್ಟಾ ಹೊದ್ದು, ಇಲ್ಲಾ ಯಾವ ಎಕ್ಸ್‌ಪೋಷರ್‌ಗೂ ಅವಕಾಶವಿಲ್ಲದಂತೆ ನೀಟಾಗಿ ಸೀರೆಯುಟ್ಟು ಅನಾದಿ ಕಾಲದ ಹೆಣ್ಣಿನಂತೆ ತಲೆ ತಗ್ಗಿಸಿ ಬಂದರೆ ಮಾತ್ರ ಕಾಲೇಜ್‌ಗೆ ಪ್ರವೇಶ. ಇಲ್ಲವೆಂದರೆ ಟಿ.ಸಿ. ಟೇಬಲ್ ಮೇಲೆ ಎವರ್ ರೆಡಿ.

ನಂಬರ್ ಟೂ: ಇಷ್ಟೆಲ್ಲಾ ಹದ್ದುಬಸ್ತು ಇರುವ ಕಾಲೇಜಿನಲ್ಲೂ, ಅದು ಹೇಗೋ ಆ ಅಯ್ಯಂಗಾರ್ ಹುಡುಗಿಯನ್ನು ಅವರು ಇಣುಕಿ ನೋಡಿಬಿಟ್ಟಿದ್ದಾರೆ. ದುಪ್ಪಟಾದಡಿ ಮುಚ್ಚಿ ಹೋಗಿ, ಕಂಡ ಆ ಹುಡುಗಿಯ ಅರೆಬರೆ ರೂಪ ಅವರ ನಿದ್ದೆಯನ್ನು ಎಂದೋ ಕೆಡಿಸಿದೆ. ನಾಲ್ಕು ವರುಷದಲ್ಲಿ ಒಮ್ಮೆಯೂ ತಮ್ಮ ಪ್ರೇಮವನ್ನು ನಿವೇದಿಸಿಕೊಳ್ಳಲು ಅವರಿಗೆ ಅವಕಾಶವೇ ದೊರೆತಿಲ್ಲ. ಈಗ ಹುಡುಗಿಯ ಕೋರ್ಸೇ ಮುಗಿದುಹೋಗಿ, ಅವರು ಕೈ ಕೈ ಹಿಸಿದುಕೊಳ್ಳುತ್ತಾ ತಮ್ಮ ಕೋಣೆಯಲ್ಲಿ ದೇವದಾಸ್‌ನಂತೆ ತಾರಸಿ ನೋಡುತ್ತಾ ಬಿದ್ದುಕೊಂಡಿದ್ದಾರೆ. ಹುಡುಗಿಯನ್ನು ಮರೆಯಲೂ ಆಗದೇ, ಮರೆಯದೇ ಇರಲೂ ಆಗದೇ ಅಮೆರಿಕಾಗೆ ಹೊರಟಿರುವ ಆಕೆಯನ್ನು ಸಂಧಿಸುವುದು ಹೇಗೆಂದು ತಲೆಕೆಳಗಾಗಿ ನಿಂತು ಲೆಕ್ಕ ಹಾಕುತ್ತಿದ್ದಾರೆ ಮತ್ತು ಸದ್ಯದಲ್ಲೇ ಸಂಧಿಸಲಿದ್ದಾರೆ. ಹಾಗಂತ ಸುದ್ದಿ.

